**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**ಎಸ್.ಸಿ.146/2022**

| | | |
|---|---|---|
| ಸಾಕ್ಷಿದಾರರ ಹೆಸರು | : | ನರಸಿಂಹ ವಿ ತಾಮ್ರಧ್ವಜ |
| ತಂದೆಯ/ಗಂಡನ ಹೆಸರು | : | ವಿಠೋಬಪ್ಪ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಡಿವೈಎಸ್ಪಿ ಕರ್ನಾಟಕ ಪೊಲೀಸ್ ಅಕಾಡೆಮಿ |
| ವಾಸ ಸ್ಥಳ | : | ಮೈಸೂರು. |

ಪಿ.ಡಬ್ಲ್ಯೂ 01

ಸಿ.ಡಬ್ಲ್ಯೂ 01

ದಿ.18-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ದಿ.23-05-2020 ರಿಂದ ದಿ.04-10-2021ರ ವರೆಗೆ ದಾವಣಗೆರೆಯ ಗ್ರಾಮಾಂತರ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಈ ಪ್ರಕರಣದಲ್ಲಿ

2. ದಿ.04-03-2021 ರಂದು ಮಧ್ಯಾಹ್ನ 12-30 ಗಂಟೆಗೆ ನಾನು ಕರ್ತವ್ಯದಲ್ಲಿದ್ದಾಗ ಪೊಲೀಸ್ ಅಧೀಕ್ಷಕರು - ನಮ್ಮ ಉಪ ವಿಭಾಗ ವ್ಯಾಪ್ತಿಯಲ್ಲಿ ಕಲ್ಲು ಗಣಿಗಾರಿಕೆ ಕ್ವಾರಿಗಳಿಗೆ ಭೇಟ್ಟಿ ನೀಡಿ ಪರಿಶೀಲಿಸುವಂತೆ ನಿರ್ದೇಶನ ನೀಡಿದರು. ಅದರಂತೆ ನಾನು , ನಮ್ಮ ಪಿಎಸ್ಐ -ಚಾಸಾ-19 , ಸಿಬ್ಬಂದಿ - ಚಾಸಾ-8, 13 ರವರೊಂದಿಗೆ ಕಲ್ಲು ಕಣಿಗಾರಿಕೆ ಕ್ವಾರಿ ಸ್ಥಳಗಳಿಗೆ ಭೇಟ್ಟಿ ನೀಡಲು ನಮ್ಮ ಇಲಾಖಾ ಜೀಪಿನಲ್ಲಿ ಹೊರಟಿದ್ದೇವು. ನಂತರ ಅಣಬೇರು ಗ್ರಾಮದಲ್ಲಿ ಗ್ರಾಮ ಲೆಕ್ಕಾಧಿಕಾರಿ ಚಾಸಾ-7 ರವರನ್ನು ಕರೆದುಕೊಂಡು ಶಂಕರನಹಳ್ಳಿ ಕ್ವಾರಿಗೆ ಭೇಟ್ಟಿ ನೀಡಿದೆವು. ಅಲ್ಲಿ

ನೋಡಲಾಗಿ ಯಾವುದೇ ಅಕ್ರಮ ಸ್ಫೋಟಕ ಕಂಡು ಬಂದಿಲ್ಲ. ಮಧ್ಯಾಹ್ನ 3-30 ಗಂಟೆಗೆ ಗುರ್ಜಿಕೊಂಡ ಗ್ರಾಮದ ಸರ್ವೆ ನಂ.13 ಕ್ಕೆ ಭೇಟ್ಟಿ ಮಾಡಿದಾಗ ಅಲ್ಲಿ ಅಕ್ರಮವಾಗಿ ಸ್ಫೋಟಕಗಳನ್ನು ಬಳಸಿ ಕಲ್ಲು ಗಣಿಗಾರಿಕೆ ನಡೆಸುತ್ತಿರುವುದು ಕಂಡು ಬಂದಿರುತ್ತದೆ. ಅಲ್ಲಿದ್ದ ಒಬ್ಬ ವ್ಯಕ್ತಿಯನ್ನು ವಿಚಾರಿಸಲಾಗಿ ಆತನ ಹೆಸರು ಕಾರ್ತಿಕ್ ತಂದೆ ಕೊಂಡಪ್ಪ ಅಂತಾ ತಿಳಿಸಿದ. ಆತನು ಕಲ್ಲು ಕ್ವಾರಿಯಲ್ಲಿ ಕೆಲಸ ಮಾಡುತ್ತಿರುವುದಾಗಿ ತಿಳಿಸಿದ. ಮತ್ತು ಈ ಕಲ್ಲು ಕ್ವಾರಿಯನ್ನು ತಂಗವೇಲು ಎಂಬ ವ್ಯಕ್ತಿ ನಡೆಸುತ್ತಿರುವುದಾಗಿ ತಿಳಿಸಿದ. ಸದರಿ ವ್ಯಕ್ತಿಯು ಕಲ್ಲಿ ಕ್ವಾರಿಯಲ್ಲಿ ಸ್ಫೋಟಕಗಳನ್ನು ಇಡಲಾಗಿದೆ ಎಂದು ತಿಳಿಸಿದ. ಸದರಿ ಕಲ್ಲು ಕ್ವಾರಿಯಲ್ಲಿ ಕಾರ್ತಿಕ್ ಎಂಬ ವ್ಯಕ್ತಿಯನ್ನು ತಂಗವೇಲು ರವರು ನೇಮಕ ಮಾಡಿರುವುದಾಗಿ ತಿಳಿದುಬಂದಿರುತ್ತದೆ. ಸದರಿ ವ್ಯಕ್ತಿಯು ಕಲ್ಲು ಕ್ವಾರಿಯಲ್ಲಿ ಕಲ್ಲನ್ನು ಒಡೆಯಲು ಸ್ಫೋಟಕ ವಸ್ತುಗಳನ್ನು ಇರಿಸಲಾಗಿದೆ ಎಂದು ತಿಳಿಸಿದರು. ಮುಂದುವರೆದು ಸದರಿಯವರು ನಮ್ಮನ್ನು ಆ ಮನೆ ಹತ್ತಿರ ಕರೆದುಕೊಂಡು ಹೋದರು. ಅಲ್ಲಿ ನಾಲ್ಕು ಸಣ್ಣ ರೂಮ್(ಕೋಣೆ) ಇದ್ದವು.

3. ನಂತರ ಮಾಯಕೊಂಡ ಪೊಲೀಸ್ ಠಾಣೆಯ ಸಿಪಿಸಿ ತಿಮ್ಮಪ್ಪ ಇವರ ಮುಖಾಂತರ ಪಂಚರಾದ ಚಾಸಡಾ-2 ಮತ್ತು 3 ಇವರನ್ನು ಬರ ಮಾಡಿಕೊಂಡು , ಅವರಿಗೆ ಪಂಚನಾಮೆಗೆ ಸಹಕರಿಸಲು ನೋಟೀಸು ಜಾರಿ ಮಾಡಲಾಯಿತು. ನಂತರ ಅವರಿಗೆ ಸಿಬ್ಬಂದಿಗಳನ್ನು ಮತ್ತು ನಮ್ಮ ತಂಡದ ಬ್ಲಾಸ್ಟರ್ ಇವರನ್ನು ಪರಿಚಯ ಮಾಡಲಾಯಿತು. ಸ್ಟೋಟಕಗಳನ್ನು ಇಟ್ಟಿರುವ ಕೋಣೆಗೆ ಆ ವ್ಯಕ್ತಿ ತೋರಿಸಿದಂತೆ ಹೋಗಿ ನೋಡಲಾಗಿ - ಸ್ಥಳದಲ್ಲಿ ಹಾಜರಿದ್ದ ಬ್ಲಾಸ್ಟಿಂಗ್ ತಜ್ಞರಾದ ಚಾಸಾ-8 ರವರು ಸದರಿ ವಸ್ತುಗಳನ್ನು ನೋಡಿ, ಪರಿಶೀಲಿಸಿದಾಗ ಅವುಗಳು ಸ್ಟೋಟಕ ವಸ್ತುಗಳು ಎಂದು ಕಂಡು ಬಂದಿರುತ್ತವೆ. ಆ ಒಂದು ಸ್ಫೋಟಕ ವಸ್ತುಗಳನ್ನು ಪರಿಣಿತ ಬ್ಲಾಸ್ಟರ್ ರವರಿಂದ ತಿಳಿದುಕೊಂಡು, ಅವುಗಳಲ್ಲಿ a) 14 ಸಾದಾ ಕೇಪುಗಳು ಇದ್ದವು, ಅವುಗಳಿಗೆ ಬತ್ತಿ ಹಾಕಿ ಬ್ಲಾಸ್ಟ ಮಾಡಿಸಲು ಬಳಸುತ್ತಾರೆ , ಎರಡು ಕೇಪುಗಳು ಪ್ರತ್ಯೇಕವಾಗಿ ಸ್ಯಾಂಪಲ್ ಗಾಗಿ ತೆಗೆದುಕೊಳ್ಳಲಾಯಿತು. b) ಹತ್ತು ಸಂಖ್ಯೆಯ IDEL power-90

ಇವುಗಳನ್ನು ಕೇಪಿಗೆ ಹಾಕಿ ಕಲ್ಲುಬಂಡೆಗಳನ್ನು ಸಿಡಿಸಲು ಉಪಯೋಗಿಸುತ್ತಿದ್ದರು. ಎರಡು ಟ್ಯುಬ್ ಗಳನ್ನು ಸ್ಯಾಂಪಲ್‌ಗಾಗಿ ತೆಗೆದುಕೊಳ್ಳಲಾಯಿತು. c) ಕನೆಕ್ಷನ್ ವೈರ್ , d) ಒಂದುವರೆ ಕೆ.ಜಿ ತೂಕದ ಮಸಿ , e) ಒಂದುವರೆ ಮೀಟರ್ ನ ವಿ–ಗಾರ್ಡ ಕೇಬಲ್ , f) ಸುಮಾರು 60 ಅಡಿ ಉದ್ದದ ಹಸಿರು ಬಣ್ಣದ ಸಾದಾ ಬತ್ತಿ , g) ಸುಮಾರು ನಲ್ಕು ಕೆ ಜಿ ಬ್ಲಾಸ್ಟಿಂಗ್ ಉಪ್ಪು , h) ಒಂದು ಕೇಪು ಚೆಕ್ ಮಾಡುವ ಮೀಟರ್ , i) ಜೀವಂತವಿದ್ದ ಒಂದು ಎಲೆಕ್ಟ್ರಿಕ್ ಡಿಟೋನೆಟರ್ , j) ಸುಮಾರು ಒಂದುವರೆ ಕೆಜಿ ರಿಗ್ ಬ್ಲಾಸ್ಟ ಮಾಡಲು ಉಪಯೋಗಿಸುವ ಎಕ್ಸಪ್ಲೊಸಿವ್ ಬೂಸ್ಟರ್ ಮಟಿರಿಯಲ್ , k) ಎರಡು ಮೆಗ್ಗರ್ ಮಶಿನ್.  ಈ ಎಲ್ಲಾ ವಸ್ತುಗಳು ಸ್ಟೋಟಕ ವಸ್ತುಗಳು ಎಂಬುದಾಗಿ ಚಾಸಾ–8 ರವರು ತಿಳಿಸದರು. ಆದ್ದರಿಂದ ಸ್ಯಾಂಪಲ್ ಗಾಗಿ ಸ್ವಲ್ಪ ಪ್ರಮಾಣದಲ್ಲಿ ಪ್ರತ್ಯೇಕವಾಗಿ ತೆಗೆದು ಪ್ಯಾಕ್ ಮಾಡಲಾಯಿತು.

4. ನಂತರ ಬ್ಲಾಸ್ಟರ್ ರವರು ಮುಂದುವರೆದು ಕೆಲವು ಸ್ಪೋಟಕವಲ್ಲದ ವಸ್ತುಗಳನ್ನು ತೋರಿಸಿದ್ದು , ಅವು – a) ಎಂಟು ಕಬ್ಬಿಣದ ದೊಡ್ಡ ಸುತ್ತಿಗೆಗಳು , b) ಎಂಟು ಸಣ್ಣ ಕಬ್ಬಿಣದ ಸುತ್ತಿಗೆಗಳು , c)  ಕಲ್ಲು ಒಡೆಯುವ 25 ಉಳಿ , d) 9 ಕಂಪ್ರೆಸರ್ ರಾಡುಗಳು , e) ಎರಡು ಕಬ್ಬಿಣದ ಜಾಕ್ ಹ್ಯಾಮರ್ಗಳು , f) ಶ್ರೀ ರಾಮಾಂಜನೇಯ ಸ್ಟೋನ್ ಇಂಡಸ್ಟ್ರೀಸ್ ರವರ ಹೆಸರಿನ ಬಿಲ್ ಪುಸ್ತಕ , g) ಏರ್ ಕಂಪ್ರೆಸರ್ ಗೆ ಬಳಸುವ ಒಂದು ಹಳೆಯ ford 3600 ಕಂಪನಿಯ ಟ್ರ್ಯಾಕಟರ್ ಇಂಜಿನ್ .

5. ನಂತರ ಸ್ಥಳಿಯ ಗ್ರಾಮಲೆಕ್ಕಾಧಿಕಾರಿಗಳಿಗೆ ಕ್ವಾರಿಯ ಜಾಗದ ಬಗ್ಗೆ ಕೇಳಲಾಗಿ ಈ ಸ್ಥಳವು ಗುರ್ಜಿಕೊಂಡ ಗ್ರಾಮದ ಜಮೀನು ಸರ್ವೆ ನಂ.13 – ಶ್ರೀ ದಿನೇಶ್ ತಂದೆ ಕೆಂಚಪ್ಪ ಇವರಿಗೆ ಸೇರಿದ ಜಮೀನು ಎಂದು ತಿಳಿಸಿದರು.

6. ನಾಲ್ಕು ಕೋಣೆಗಳ ಪೈಕಿ ಎರಡು ಕೋಣೆಗಳಲ್ಲಿ ಕೂಲಿ ಕಾರ್ಮಿಕರು ವಾಸಿಸುತ್ತಿದ್ದರು. ಇನ್ನೆರಡು ಕೋಣೆಗಳಲ್ಲಿ ಸ್ಟೋಟಕ ಮತ್ತು ಸ್ಟೋಟಕವಲ್ಲದ

ವಸ್ತುಗಳನ್ನು ಶೇಖರಣೆ ಮಾಡಲಾಗಿತು. ಈ ಜಾಗದಲ್ಲಿ ಸ್ಫೋಟಕ ವಸ್ತುಗಳನ್ನು ಇಡಲು ಯಾವುದೆ ಸುರಕ್ಷಿತ ಕ್ರಮಗಳನ್ನು ಅನುಸರಿಸಿರುವುದಿಲ್ಲ. ಸ್ಟೋಟಕ ಇಟ್ಟಿದ್ದ ಕೋಣೆಯಲ್ಲಿ ಒಂದು ಯು.ಪಿ.ಎಸ್ ಮತ್ತು ಬ್ಯಾಟರಿ ಇತ್ತು. ಈ ನಾಲ್ಕು ಕೋಣೆಗಳ ಹಿಂಭಾಗದ ಒಂದು ಶೆಡ್ಡನಲ್ಲಿ ಏರ್ ಕಂಪ್ರೆಸರ್ಗಾಗಿ ಉಪಯೋಗಿಸುವ ಟ್ರ್ಯಾಕ್ಟರ್ ಇಂಜಿನ್ ಇತ್ತು. ಸ್ಫೋಟಕ ವಸ್ತು ದೊರೆತ ಸ್ಥಳದ ಹಿಂಬದಿಯ ಪಶ್ಚಿಮದಲ್ಲಿ ಕಲ್ಲು ಕ್ವಾರಿ ಜಾಗವಿರುತ್ತದೆ. ಅಲ್ಲಿ ಸುಮಾರು 150 ಅಡಿ ಅಗಲ ಮತ್ತು ಸುಮಾರು 120 ಅಡಿ ಆಳವಿರುವ ಕಲ್ಲು ಕ್ವಾರಿ ಕಂಡು ಬಂದಿರುತ್ತದೆ.

7. ಸ್ಟೋಟಕ ವಸ್ತುಗಳ ಸ್ಯಾಂಪಲ್ ಗಳನ್ನು ಪ್ರತ್ಯೇಕವಾಗಿ ಪ್ಲಾಸ್ಟಿಕ್ ಕವರ್ ಮತ್ತು ಬಟ್ಟೆ ಚೀಲಗಳಲ್ಲಿ ತಜ್ಞರ ಪರೀಕ್ಷೆಗಾಗಿ ಹಾಕಲಾಯಿತು. ನಮ್ಮ ತಂಡದ ಅಶ್ವಿನ್ ಕುಮಾರ್ ರವರು ಉಳಿದ ಸ್ಟೋಟಕ ವಸ್ತುಗಳನ್ನು ಸುರಕ್ಷತೆಯ ದೃಷ್ಟಿಯಿಂದ ಕಾಡಜ್ಜಿ ಗ್ರಾಮದ ದುರ್ಗಾದೇವಿ ಎಕ್ಸಪ್ಲೋಸಿವ್ ಮ್ಯಾಗಜಿನ್ ಗೆ ತೆಗೆದುಕೊಂಡು ಹೋದರು. ಪಂಚನಾಮೆಯನ್ನು ಸಂಜೆ 4–00 ರಿಂದ 6–30 ಗಂಟೆ ವರೆಗೆ ಪಂಚರ ಸಮಕ್ಷಮ ಮಾಡಲಾಯಿತು. ಆ ಪಂಚನಾಮೆಯನ್ನು ಈಗ ನೋಡುತ್ತಿದ್ದು , ಅದರಲ್ಲಿ ನನ್ನ ಸಹಿ ಇದೆ. ಪಂಚನಾಮೆಯನ್ನು ನಿಪಿ.1 ಎಂದು , ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಕರಡು ನಕ್ಷೆ ಮತ್ತು ಫೋಟೋಗಳನ್ನು ತೆಯಲಾಗಿತ್ತು. ಆ ಕರಡುನಕ್ಷೆ ನೋಡುತ್ತಿದ್ದು , ಅದನ್ನು ನಿಪಿ.2 ಎಂದು , ನನ್ನ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಆಗ ತೆಗೆದ ಒಂದು ಫೋಟೋ ನೋಡುತ್ತಿದ್ದು , ಅದನ್ನು ನಿಪಿ.3 ಎಂದು ಗುರುತಿಸಲಾಯಿತು. ಸ್ಟೋಟಕ ವಸ್ತುಗಳ ಫೋಟೋ ನೋಡುತ್ತಿದ್ದು , ಅದನ್ನು ನಿಪಿ.4 ಎಂದು , ಸ್ಟೋಟಕವಲ್ಲದ ವಸ್ತುಗಳ ಫೋಟೋ ನೋಡುತ್ತಿದ್ದು , ಅದನ್ನು ನಿಪಿ.5 ಎಂದು ಗುರುತಿಸಲಾಯಿತು. ಸ್ಥಳದಲ್ಲಿದ್ದ ಟ್ರ್ಯಾಕ್ಟರ್ ಎಂಜಿನಿನ ಫೋಟೋ ನೋಡುತ್ತಿದ್ದು , ಅದನ್ನು ನಿಪಿ.6 ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಆಗ ಇದ್ದ ಕಾರ್ತಿಕ್,ಪಂಚರು ಹಾಗೂ ಚಾಸಾ–8 ರವರು ಇದ್ದ ಒಂದು ಫೋಟೋ ನೋಡುತ್ತಿದ್ದು , ಅದನ್ನು ನಿಪಿ.7 ಎಂದು ಗುರುತಿಸಲಾಯಿತು. ಕಾರ್ತಿಕ್ ರವರು ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ.

ಅವರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಕಾರ್ತಿಕ್ ರವರು ನಿಪಿ.7 ರಲ್ಲಿ ಕ್ರಮ ಸಂಖ್ಯೆ .9 ಎಂದು ನೀಡಲಾಗಿದೆ. ಎರಡು ಕೋಣೆಗಳ ಭಾವ ಚಿತ್ರ ನೋಡುತ್ತಿದ್ದು, ಅವುಗಳನ್ನು ನಿಪಿ.8 ಮತ್ತು 9 ಎಂದು ಗುರುತಿಸಲಾಯಿತು.

8. ನಾವು ಜಪ್ತಿ ಮಾಡಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. (ಸುರಕ್ಷತೆಯ ದೃಷ್ಟಿಯಿಂದ ಜಪ್ತಿ ಮಾಡಿದ ಸ್ಫೋಟಕ ವಸ್ತುಗಳು ಕಾಡಜ್ಜಿ ಗ್ರಾಮದ ಮ್ಯಾಗಜಿನ್ ನಲ್ಲಿ ಇರುತ್ತವೆ. ಸದರಿ ವಸ್ತುಗಳನ್ನು ಗುರುತಿಸುವ ಸಲುವಾಗಿ ಸರ್ಕಾರಿ ಅಭಿಯೋಜರು ಸಮಯ ಕೋರಿದ್ದು , ಕೋರಿಕೆ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,

ದಾವಣಗೆರೆ.